# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ. ವೆಂಕಟೇಶ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1002
ಉತ್ತರಿಸಬೇಕಾದ ದಿನಾಂಕ : 29.09.2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2019ನೇ ಸಾಲಿನಲ್ಲಿ ಮೈಮುಲ್‌ನಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಮೈಸೂರು ಇದರ ವೃಂದ ಬಲದಲ್ಲಿ ಖಾಲಿ ಇರುವ 168 ವಿವಿಧ ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:07.09.2019 ರಂದು ನೇಮಕಾತಿ ಪ್ರಕಟಣೆ ಹೊರಡಿಸಲಾಗಿದೆ.<br>ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9123/2020 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಸಲ್ಲಿಕೆಯಾಗಿರುವುದರಿಂದ ಮಾನ್ಯ ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿದ್ದು, ಅದರಂತೆ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಯಾವ ಯಾವ ಹುದ್ದೆಗಳ ನೇಮಕಾತಿ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿತ್ತು. ಅಧಿಸೂಚನೆಯಲ್ಲಿ ನಿಗಧಿಪಡಿಸಲಾದ ಅರ್ಹತೆಗಳನುಸಾರ ನೇಮಕಾತಿ ನಡೆದಿದೆಯೇ (ನೇಮಕಾತಿಗೊಂಡವರ ವಿವರ ನೀಡುವುದು) | ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ., ಮೈಸೂರು ಇದರ ವೃಂದ ಬಲದಲ್ಲಿ ಖಾಲಿ ಇರುವ ಈ ಕೆಳಕಾಣಿಸಿದ ಹುದ್ದೆಗಳ ನೇಮಕಾತಿಗಾಗಿ ದಿ:07.09.2019 ರಂದು ನೇಮಕಾತಿ ಪ್ರಕಟಣೆ ಹೊರಡಿಸಲಾಗಿದೆ. |

| ಕ್ರ ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು |
|---|---|---|
| 1 | ಸಹಾಯಕ ವ್ಯವಸ್ಥಾಪಕರು (ಎ.ಹೆಚ್.& ಎ.ಐ) | 12 |
| 2 | ಸಹಾಯಕ ವ್ಯವಸ್ಥಾಪಕರು (ಎಫ್&ಎಫ್) | 02 |
| 3 | ತಾಂತ್ರಿಕ ಅಧಿಕಾರಿ (ಡಿ.ಟಿ) | 05 |
| 4 | ಖರೀದಿ/ಉಗ್ರಾಣಾಧಿಕಾರಿ | 01 |
| 5 | ಆಡಳಿತಾಧಿಕಾರಿ | 01 |
| 6 | ಲೆಕ್ಕಾಧಿಕಾರಿ | 01 |
| 7 | ಎಂಐಎಸ್ / ಸಿಸ್ಟಂ ಆಫೀಸರ್ | 01 |
| 8 | ತಾಂತ್ರಿಕಅಧಿಕಾರಿ (ಗು.ನಿ) | 02 |
| 9 | ಮಾರುಕಟ್ಟೆ ಅಧಿಕಾರಿ | 02 |
| 10 | ಭದ್ರತಾ ಅಧಿಕಾರಿ | 01 |
| 11 | ತಾಂತ್ರಿಕಾಧಿಕಾರಿ (ಇಂಜನಿಯರಿಂಗ್) | 05 |
| 12 | ಡೈರಿ ಸೂಪರ್‌ವೈಸರ್ ದರ್ಜೆ–2 | 04 |
| 13 | ವಿಸ್ತರಣಾಧಿಕಾರಿ ದರ್ಜೆ–3 | 15 |
| 14 | ಕೆಮಿಸ್ಟ್ ದರ್ಜೆ–2 | 12 |
| 15 | ಲೆಕ್ಕ ಸಹಾಯಕ ದರ್ಜೆ–2 | 04 |
| 16 | ಅಡ್ಮಿನ್ ಅಸಿಸ್ಟೆಂಟ್ ದರ್ಜೆ–2 | 18 |
| 17 | ಭದ್ರತಾ ಸಹಾಯಕರು | 08 |
| 18 | ಮಾರುಕಟ್ಟೆ ಸಹಾಯಕ ದರ್ಜೆ–2 | 18 |
| 19 | ಜೂನಿಯರ್ ಸಿಸ್ಟಂ ಅಪರೇಟರ್ | 07 |
| 20 | ಜೂನಿಯರ್‌ಟೆಕ್ನಿಷಿಯನ್ /ಬಾಯ್ಲರ್‌ಅಟೆಂಡೆಂಟ್ | 49 |

ಈ ಮೂಲ ನೇಮಕಾತಿ ಪ್ರಕಟಣೆಯೊಂದಿಗೆ ಹೆಚ್ಚುವರಿ ಈ ಕೆಳಕಂಡ 25 ಹುದ್ದೆಗಳ ನೇಮಕಾತಿಗೂ ಕ್ರಮ ಅನುಸರಿಸಲಾಗಿದೆ.

| ಕ್ರ. ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು |
|---|---|---|
| 1 | ವಿಸ್ತರಣಾಧಿಕಾರಿ ದರ್ಜೆ–3 | 12 |
| 2 | ಕೆಮಿಸ್ಟ್ ದರ್ಜೆ–2 | 02 |
| 3 | ಲೆಕ್ಕ ಸಹಾಯಕ ದರ್ಜೆ–2 | 02 |
| 4 | ಅಡ್ಮಿನ್ ಅಸಿಸ್ಟೆಂಟ್ ದರ್ಜೆ–2 | 05 |
| 5 | ಜೂನಿಯರ್‌ಟೆಕ್ನಿಷಿಯನ್ /ಬಾಯ್ಲರ್‌ಅಟೆಂಡೆಂಟ್ | 04 |

ಅಧಿಸೂಚನೆಯಲ್ಲಿ ನಿಗಧಿಪಡಿಸಲಾದ ಅರ್ಹತೆಗಳಿಗುನುಸಾರ ಮತ್ತು ಷರತ್ತು-ನಿಬಂಧನೆಗಳಂತೆ ಒಕ್ಕೂಟದ ನೇಮಕಾತಿ ಸಮಿತಿಯು ನೇಮಕಾತಿ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡು ಸಂದರ್ಶನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುತ್ತದೆ. ಆದರೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9123/2020 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಸಲ್ಲಿಕೆಯಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶವು **"The final Selection list shall not be published without the leave of the court"** ಆಗಿರುತ್ತದೆ. ಮಾನ್ಯ ನ್ಯಾಯಾಲಯದ ಈ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

**ಸಂಖ್ಯೆ: ಸಿಒ 85 ಸಿಸಿಬಿ 2020**

(signature)
**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**

991 (1002)